ಶ್ರೀ ಮಂಜುನಾಥ ಸಿ. ಕುನ್ನೂರ್:- ಈ ಉತ್ತರದಲ್ಲಿ ಅಬ್ಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಹಣ ಸಾಕಷ್ಟು ಇದ್ದುದರಿಂದ ಅದನ್ನು ಕೂಡಲೇ ವಸೂಲ್ಮಾಡಲಿಕ್ಕೆ ಇರತಕ್ಕ ತೊಂದರೆಗಳೇನು ಎಂಬುದನ್ನು ಮಾನ್ಯ ಅಬ್ಕಾರಿ ಸಚಿವರನ್ನು ಕೇಳುತ್ತೇನೆ.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೇ, ಅದಕ್ಕೆ ಕ್ರಮಗಳನ್ನು ತೆಗೆದು ಕೊಳ್ಳಲಾಗುತ್ತಿದೆ. ಕೋರ್ಟಿನಲ್ಲಿ ದಾವಾಗಳನ್ನು ಹಾಕಲಾಗಿದೆ. ಎಕ್ಸೈಜ್ ಆ್ಯಕ್ಟಿಗೆ ಕೂಡ ಅಮೆಂಡ್‌ಮೆಂಟ್ ತರಲಾಗಿದೆ. ಕೋರ್ಟ್ ಇಂಜಂಕ್ಷನ್ ಆರ್ಡರ್ ಕೊಟ್ಟರೂ ಕೂಡ ಕೆಲವೊಂದು ಸಲ ಕಂಟ್ರಾಕ್ಟರ್ಸ್ ವಿರುದ್ಧ ಏನಾದರೂ ಕೇಸ್ ಮಾಡಿದ್ದರೆ ಆ ಇಂಜಂಕ್ಷನ್ ಸಿಗುವಾಗ ಅಮೆಂಡ್‌ಮೆಂಟ್ ಮಾಡಿದ್ದರೂ ಕೂಡ ಆ ಅಮೆಂಡ್‌ಮೆಂಟಿಗೆ ಹೈಕೋರ್ಟಿನಲ್ಲಿ ಸ್ಟೇ ಆಗಿದೆ. ಸರ್ಕಾರ ಎಲ್ಲಾ ರೀತಿಯಲ್ಲಿಯೂ ಅರಿಯರ್ಸ್ ವಸೂಲ್ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ಎಕ್ಸೈಜ್ ಬಾಬಿನಲ್ಲಿ ಎಷ್ಟು ಹಣ ಬಾಕಿ ಇದೆ. ಯಾರ್ಯಾರಿಂದ ಉಳಿದಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿದರೆ ಗೊತ್ತಾಗುತ್ತದೆ. ಅಂದರೆ ಕೋರ್ಟ್ ಸ್ಟೇಯಿಂದ ಎಷ್ಟು ಹಣ ಕೊಡತಕ್ಕದ್ದು ಬಾಕಿ ಇದೆ? ಅವರು ಡೀಫಾಲ್ಟರ್ ಆಗಿರುವುದರಿಂದ ಎಷ್ಟು ಹಣ ಬಾಕಿ ಇದೆ ಎಂದು ತಾವು ಸ್ಪಷ್ಟವಾಗಿ ಹೇಳಿದರೆ ಗೊತ್ತಾಗುತ್ತದೆ.

ಶ್ರೀ ಹೆಚ್.ಡಿ.ದೇವೇಗೌಡ: ಮಾನ್ಯ ಖರ್ಗೆಯವರು ಕೇಳಿದ ಪ್ರಶ್ನೆಗೆ ಬಹುಶಃ ಈ ಸಂದರ್ಭದಲ್ಲಿ ಉತ್ತರ ಸಿಗುವುದು ಕಷ್ಟವಾಗಬಹುದು. ನಾಳೆ ಈ ಸದನದಲ್ಲಿ ಪ್ರಶ್ನೋತ್ತರ ವೇಳೆ ಆದಮೇಲೆ ಸರ್ಕಾರದ ವತಿಯಿಂದ ಒಂದು ಹೇಳಿಕೆ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಏಕೆಂದರೆ ಎಷ್ಟು ಹಣ ಬಾಕಿ ಇದೆ, ನಾವು ಎಷ್ಟು ಸ್ಟೇ ಕೊಟ್ಟಿದ್ದೇವೆಯೇ ಅಥವಾ ಕೋರ್ಟಿನಿಂದ ಎಷ್ಟನ್ನು ಸ್ಟೇ ತೆಗೆದುಕೊಂಡಿದ್ದಾರೆ, ಎಷ್ಟು ವರ್ಷಗಳಿಂದ ಹಣ ಬಾಕಿ ಇದೆ, ಯಾರ್ಯಾರಿಂದ ಬಾಕಿ ಇದೆ ಎಲ್ಲಾ ವಿವರಗಳನ್ನೊಳಗೊಂಡ ಒಂದು ಹೇಳಿಕೆಯನ್ನು ನಾನು ಈ ಸಭೆಯ ಮುಂದೆ ನಾಳೆ ಕೊಡಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ತಾಲ್ಲೂಕುವಾರು ಮಾಹಿತಿ ಕೊಟ್ಟರು. ಈಗ ಅದು ನನ್ನ ಹತ್ತಿರ ಇಲ್ಲ, ಆದರೂ ನಾನು ಅದನ್ನು ಓದಿದ್ದೇನೆ. 175 ತಾಲ್ಲೂಕಿನ ಕಂಟ್ರಾಕ್ಟರುಗಳ ಹೆಸರು ಮತ್ತು ಅವರ ವಿಳಾಸ ಎಲ್ಲಾ ವಿವರಗಳನ್ನು ಕೊಟ್ಟಿದ್ದಾರೆ. ಅಂದಾಗ ಯಾವ ಯಾವ ಕಂಟ್ರಾಕ್ಟರಲ್ಲಿ ಎಷ್ಟೆಷ್ಟು ಹಣ ಬಾಕಿ ಇದೆ, ಕೋರ್ಟ್ ತಡೆಯಾಜ್ಞೆ ಯಾವುದಕ್ಕೆ ಇದೆ ಈ ಎಲ್ಲಾ ಮಾಹಿತಿ ಅವರ ಹತ್ತಿರ ಇದೆ.

ಅಧ್ಯಕ್ಷರು:-ನಿಮಗೆ ಎಲ್ಲಾ ಗೊತ್ತಿರುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಾಗಾದರೆ ನಾವು ಪ್ರಶ್ನೆ ಹಾಕುವುದು ಬೇಡ, ಅವರು ಉತ್ತರ ಕೊಡುವುದು ಬೇಡ. ನಾಳೆಯಾದರೂ ಹೇಳಿಕೆ ಕೊಡುತ್ತಾರೆಯೇ?

ಅಧ್ಯಕ್ಷರು: ಹೇಳಿಕೆ ಕೊಡುತ್ತೇವೆಂದು ಹೇಳಿದ್ದಾರಲ್ಲ.

ವಿಷಯ:- ಸೋಮವಾರಪೇಟೆ ಪೋಲೀಸ್ ಠಾಣೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 213(1781)

ಶ್ರೀ ಅಪ್ಪಚ್ಚುರಂಜನ್ ಎಂ.ಡಿ. (ಸೋಮವಾರಪೇಟೆ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜುಲೈ ತಿಂಗಳಲ್ಲಿ ಕೊಡಗಿನ ಸೋಮವಾರಪೇಟೆ ಆರಕ್ಷಕ ಠಾಣೆಯಲ್ಲಿ ಪೋಲೀಸರ ಹೊಡೆತದಿಂದ ಮರಣ ಹೊಂದಿದ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ)ಪೋಲೀಸ್ ಲಾಕಪ್‌ನಲ್ಲಿ ಮೃತನಾದ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ನೀಡುವ ಕುರಿತು ಕೈಗೊಳ್ಳಲಾಗಿರುವ ಕ್ರಮವೇನು?

ಇ)ತಪ್ಪಿತಸ್ಥ ಪೋಲೀಸರ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಗೃಹ ಸಚಿವರು):-

ಅ) ಹೌದು

ಆ) ಪೋಲೀಸ್ ಲಾಕಪ್ಪಿನಲ್ಲಿ ಮೃತನಾದ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ನೀಡಲು, ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಇ) ತಪ್ಪಿತಸ್ಥ ಪೋಲೀಸ್ ಕಾನ್ಸ್‌ಟೇಬಲ್ ಸುರೇಶ ಎಂಬುವರನ್ನು ದಿನಾಂಕ 5-7-95 ರಂದು, ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನದಲ್ಲಿಡಲಾಗಿದೆ. ಹೆಡ್ ಕಾನ್ಸ್‌ಟೇಬಲ್ (ಠಾಣಾಧಿಕಾರಿ) ಒ.ಕೆ.ಕರಿಯಪ್ಪ ಇವರನ್ನು ದಿನಾಂಕ 5-7-95 ರಿಂದ ಅಮಾನತ್ತಿನಲ್ಲಿಡಲಾಗಿದೆ. ಪ್ರಕರಣದ ತನಿಖೆಯನ್ನು ದಿನಾಂಕ 17-7-95 ರಂದು ಸಿ.ಒ.ಡಿಗೆ ತನಿಖೆಗಾಗಿ ವಹಿಸಲಾಗಿದೆ.

ಶ್ರೀ ಎಂ.ಡಿ.ಅಪ್ಪಚ್ಚುರಂಜನ್:- ಪೋಲೀಸ್ ಲಾಕ್‌ಪ್‌ನಲ್ಲಿ ಮೃತರಾದ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ಕುರಿತು ಕೈಗೊಳ್ಳುವ ಕಾರ್ಯಕ್ರಮ ಏನೆಂದು ಕೇಳಿದ್ದೇನೆ, ಅದಕ್ಕೆ ಉತ್ತರವಾಗಿ ಪೋಲೀಸ್ ಲಾಕ್‌ಪ್‌ನಲ್ಲಿ ಮೃತನಾದ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ನೀಡಲು ನಿಯಮಾವಳಿಯಲ್ಲಿ ಯಾವುದೇ ಅವಕಾಶ ಇರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಯಾವುದೇ ಅತಿವೃಷ್ಟಿಯಾಗಿ ಅಥವಾ ಆಕಸ್ಮಿಕವಾಗಿ ಸತ್ತಾಗ ಅವರ ಕುಟುಂಬಕ್ಕೆ ಪರಿಹಾರ ಕೊಡುತ್ತಾರೆ. ಏನಾದರೂ ಕೋಮುಗಲಭೆಯಾಗಿ ಮೃತರಾದಾಗ ಕೂಡ ಅವರ ಕುಟುಂಬಕ್ಕೆ ಸಾಧಾರಣವಾಗಿ 50 ರಿಂದ ಒಂದು ಲಕ್ಷ ರೂಪಾಯಿಗಳವರೆಗೆ ಪರಿಹಾರ ಕೊಡುತ್ತಾರೆ. ಇಂಥ ಸ್ಥಿತಿಯಲ್ಲಿರುವಾಗ ಮಾನವೀಯತೆಯ ದೃಷ್ಟಿಯಿಂದ ಏಕೆ ಅವರ ಕುಟುಂಬಕ್ಕೆ ಲಾಕಪ್ ಡೆತ್ ಆದಾಗ ಕೂಡ ಪರಿಹಾರ ಕೊಡಬಾರದು? ಕಾನೂನಿನಲ್ಲಿ ಏಕೆ ಈ ರೀತಿಯಾದ ಒಂದು ತಿದ್ದುಪಡಿ ತರಬಾರದೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಈಗಿರತಕ್ಕ ಕಾನೂನಿನಲ್ಲಿ ಅವಕಾಶ ಇಲ್ಲ. ಕಾನೂನು ತಿದ್ದುಪಡಿ ಮಾಡಬೇಕಂಬ ವಿಷಯವನ್ನು ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ:- ಲಾಕಪ್‌ಗಳಲ್ಲಿ ಪೋಲೀಸರು ಹೊಡೆದು ಸಾಯಿಸುತ್ತೆರೆ. ಇರತಕ್ಕ ಅಪಾದನೆ ಅದು ತಾನೆ. ಅದಕ್ಕೆ ಪರಿಹಾರ ಕೊಡುವುದಕ್ಕೆ ಮುಖ್ಯ ಮಂತ್ರಿಗಳ ನಿಧಿ ಇದೆ. ಸರ್ಕಾರಕ್ಕೆ ಪರಿಹಾರ ಕೊಡಬೇಕೆಂಬ ಮನಸ್ಸು ಇದ್ದರೆ ಕಾನೂನಿನಲ್ಲಿ ಅವಕಾಶ ಇಲ್ಲವೆಂದು ಹೇಳತಕ್ಕದ್ದು ಉತ್ತರವಲ್ಲ. ಈಗಲೂ ದಯವಿಟ್ಟು ವಿಚಾರ ಮಾಡಿ. ಸತ್ತವನು ಬಹಳ ಬಹಳ ಬಡ ಕುಟುಂಬದಿಂದ ಬಂದು ಅವನ ಮಕ್ಕಳು ಸಂಸಾರದವರು ಬೀದಿ ಪಾಲಾಗಿದ್ದಾರೆ. ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದಲಾದರೂ ಕೊಡಿಸಿ, ಕಾನೂನು ಆಮೇಲೆ ತಿದ್ದುಪಡಿ ಮಾಡುವಿರಂತೆ. ನೀವು ಅವತ್ತು ಸ್ಥಳದಲ್ಲೇ ಇದ್ದಿರಿ. ಲಾಕಪ್‌ನಲ್ಲಿ ಡೆತ್ ಆದ ದಿನ ಮಡಿಕೇರಿಯಲ್ಲಿದ್ದಿರಿ. ಅಷ್ಟು ಹತ್ತಿರ ಹೋಗಿ ನೀವು ಅಲ್ಲಿಗೆ ಹೋಗಿಲ್ಲ. ಮಂತ್ರಿಗಳು 20-30 ಕಿಲೋಮೀಟರ್ ಹತ್ತಿರ ಇರುತ್ತಾರೆಂದರೂ

ಅವರಿಗೆ ಭಯಭೀತಿ ಇಲ್ಲ. ಹಿಂದಿನ ದಿನ ಬರುತ್ತಾರೆಂದು ಎಲ್ಲ ಕಡೆ ಗೊತ್ತಾಗಿದೆ. ಇವರೂ ಅಲ್ಲೇ ಇದ್ದಾರೆ. ಹೋಂ ಮಿನಿಸ್ಟರ್ ಪಕ್ಕದಲ್ಲಿದ್ದರೂ ಅವರಿಗೆ ಭೀತಿ ಇಲ್ಲ. ಪೋಲೀಸರು ಹೊಡೆದು ಸಾಯಿಸಿದ್ದಾರೆ. ನೀವು ಅಲ್ಲಿ ಹೋಗಬಾರದಿತ್ತೆ?

ಶ್ರೀ ಪಿ.ಜಿ.ಆರ್.ಸಿಂಧ್ಯ :- ಈಗ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಕೊಡತಕ್ಕ ವಿಚಾರದಲ್ಲಿ ಹೇಳುವುದಾದರೆ, ಎಲ್ಲ ಲಾಕ್‌ಅಪ್ ಡೆತ್‌ಗಳಲ್ಲೂ ಸಹಿತ ಕೆಲವು ಡಿಸ್‌ಪ್ಯೂಟ್‌ಗಳು ಇರುತ್ತವೆ. ಲಾಕಪ್‌ನಲ್ಲಿ ಆಗತಕ್ಕ ಸಾವುಗಳಿಗೆ ಹೈಕೋರ್ಟಿನಲ್ಲಿ ದುಡ್ಡು ಕೊಡಬೇಕೆಂದು ಎರಡು ಮೂರು ಕೇಸುಗಳಲ್ಲಿ ದುಡ್ಡು ಕೊಟ್ಟಿರತಕ್ಕದ್ದು ಇದೆ. ಪೋಲೀಸ್ ಕಸ್ಟಡಿಯಲ್ಲಿ ಸಾಯತಕ್ಕದ್ದರ ಬಗ್ಗೆ ಸಹಿತ ಡಿಸ್‌ಪ್ಯೂಟ್‌ಗಳು ಇರುತ್ತವೆ.

ಆದಕ್ಕೋಸ್ಕರ ಹಿಂದಿನ ಸರ್ಕಾರದಲ್ಲಿ ಒಂದು ನಿರ್ಧಾರ ತೆಗೆದುಕೊಂಡಿದ್ದಾರೆ. ಪೋಲೀಸ್ ಕಸ್ಟಡಿಯಲ್ಲಿ, ಲಾಕ್‌ಪ್‌ನಲ್ಲಿರತಕ್ಕ ಸಂದರ್ಭದಲ್ಲಿ ಯಾರೇ ಸತ್ತರೂ ಆ ಕೇಸನ್ನು ಒಬ್ಬ ಸಬ್-ಡಿವಿಜನಲ್ ಮ್ಯಾಜಿಸ್ಟ್ರೇಟ್ ಎನ್‌ಕ್ವೆಯಿರಿ ಮಾಡಬೇಕು ಎಂದು ಒಂದು. ಆದಾದನಂತರ ಸಿ.ಒ.ಡಿ ಗೆ ಆ ಕೇಸನ್ನು ರೆಫರ್ ಮಾಡಬೇಕು ಎಂದು ಸಾವಿನ ಬಗ್ಗೆ ಡಿಸ್‌ಪ್ಯೂಟ್ ಇರುತ್ತದೆ. ಆದುದರಿಂದ ಈಗಿರತಕ್ಕ ನಿಯಮಾವಳಿ ಪ್ರಕಾರ ಹಣ ಕೊಡುವುದಕ್ಕೆ ಅವಕಾಶ ಇಲ್ಲ. ಆದರೂ ಇದರ ಬಗ್ಗೆ ಸರ್ಕಾರ ದೀರ್ಘವಾಗಿ ಪರಿಶೀಲನೆ ಮಾಡುತ್ತಿದೆ. ಹಿಂದಿನ ಸರ್ಕಾರದಲ್ಲಿ ಇದರ ಬಗ್ಗೆ ಅನೇಕ ಪ್ರಸ್ತಾಪಗಳನ್ನು ತಾವು ಗೃಹ ಮಂತ್ರಿಗಳಾಗಿರತಕ್ಕ ಸಂದರ್ಭದಲ್ಲಿ ಮಾಡಿದ್ದೀರಿ. ಇದನ್ನು ಪರಿಶೀಲನೆ ಮಾಡತಕ್ಕ ಭರವಸೆ ಕೊಡುತ್ತೇನೆ. ನಾನು ಆ ದಿನ ಸೋಮವಾರ ಪೇಟೆಯಲ್ಲಿರಲಿಲ್ಲ. ನಾನು ಇದ್ದದ್ದು ಮಡಿಕೇರಿಯಲ್ಲಿ. ಸಾವು ಆದದ್ದು ಒಂದೂವರೆ, ಎರಡು ಗಂಟೆ ಸಮಯದಲ್ಲಿ. ಆವತ್ತು ಮಡಿಕೇರಿ ಬಂದ್ ಆಚರಣೆ ಮಾಡುತ್ತಾರೆ. ಪೋಲೀಸ್ ಸ್ಟೇಷನ್ ಮೇಲೆ ಕಲ್ಲು ಹೊಡೆಯುತ್ತಾರೆಂದು ವರ್ತಮಾನ ಬಂತು. ನನಗೆ ಆ ದಿನ ಬೇರೆ ಕಡೆ ಕಾರ್ಯಕ್ರಮ ಇತ್ತು. ನನಗೆ ಲಾಕಪ್ ಡೆತ್ ಆಯಿತೆಂದು ಗೊತ್ತಾದದ್ದು ಆವತ್ತು ಸಾಯಂಕಾಲ ಎಂದು ಹೇಳಬಹುದು. ನಾನು ಅಲ್ಲಿದ್ದರೆ ಹೋಗುತ್ತಿದ್ದೆ. ಅಲ್ಲಿ ಪ್ರಕ್ಷುಬ್ಧ ವಾತಾವರಣ ಇದೆ ಎಂದು ನನಗೆ ಗೊತ್ತಿತ್ತು. ಅನೇಕ ಸಂದರ್ಭಗಳಲ್ಲಿ ನಾವು ಹೋಗುವುದರಿಂದ ಮತ್ತಷ್ಟು ಪರಿಸ್ಥಿತಿ ಉಲ್ಬಣವಾಗುತ್ತದೆ. ಆದುದರಿಂದ ಅನೇಕ ಸಂದರ್ಭಗಳಲ್ಲಿ ನಾವು ಅಧಿಕಾರಿಗಳಿಗೆ ಬಿಡಬೇಕಾಗುತ್ತದೆ. ಕಮ್ಯುನಲ್ ಕ್ಲಾಷಸ್ ಆದಾಗ ಮತ್ತೊಂದು ಆದಂಥ ಸಂದರ್ಭದಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಮೇಲೆ ನಾವು ಹೋಗುವುದರಲ್ಲಿ ಅರ್ಥ ಇದೆ. ಪರಿಸ್ಥಿತಿ ನಿಯಂತ್ರಣಕ್ಕೆ ಮುಂಚೆ ಹೋಗುವುದರಲ್ಲಿ ಏನು ಅರ್ಥ ಇದೆ ತಾವೇ ಹೇಳಿ.

ಶ್ರೀ ಬಿ.ಬಿ.ಶಿವಪ್ಪ:- ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಪ್ರಶ್ನೆ. ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಈ ಕೇಸಿಗೆ ಸಂಬಂಧಪಟ್ಟ ವಿಚಾರದಲ್ಲಿ ಸಿ.ಒ.ಡಿ ತನಿಖೆಗೆ ಹಾಕಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಮೇಲಿನ ಪ್ರಶ್ನೆಯಲ್ಲಿ ಆರಕ್ಷಕ ಠಾಣೆಯಲ್ಲಿ ಪೋಲೀಸರ ಹೊಡೆತದಿಂದ ಮರಣ ಹೊಂದಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದಾರೆ. ಹೌದು ಎಂದು ಸರ್ಕಾರ ಒಪ್ಪಿಕೊಂಡಿದೆ. ಅಂದಮೇಲೆ ಪೋಲೀಸರೇ ಹೊಡೆದು ಸಾಯಿಸಿದ್ದಾರೆ ಎಂದು ತೀರ್ಮಾನ ಆಗಿದೆ. ಹಾಗೆ ತೀರ್ಮಾನ ಆದಮೇಲೆ ತನಿಖೆ ವರದಿ ಬರುವವರೆಗೆ ಮೃತರ ಕುಟುಂಬಕ್ಕೆ ಯಾವುದಾದರೂ ರೀತಿಯಲ್ಲಿ ಪರಿಹಾರವನ್ನು ಕೊಡುವುದಕ್ಕೆ ಕಾಯಬೇಕಾದ ಪರಿಸ್ಥಿತಿ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರಾದ ಅಪ್ಪಚ್ಚು ರಂಜನ್ ಅವರು ಹೇಳಿದಂತೆ ಯಾವಯಾವದೋ ಕಾರಣದಲ್ಲಿ ಸತ್ತಂಥ ಜನರಿಗೆ ನಾವು ಹಣ ಕೊಡುತ್ತಿದ್ದೇವೆ. ಇಂಥ ಸಂಧರ್ಭದಲ್ಲಿ, ಯಾವುದೋ ಕಾರಣಕ್ಕಾಗಿ ಪೋಲೀಸ್ ಸ್ಟೇಷನ್ನಿಗೆ

ಕರೆದುಕೊಂಡು ಹೋದ ವ್ಯಕ್ತಿ ಮತ್ತೆ ವಾಪಸ್ ಆಲ್ಲಿಂದ ಬರಲಿಲ್ಲ. ಮತ್ತೆ ಸರ್ಕಾರವೂ ಒಪ್ಪಿಕೊಂಡಿದೆ ಪೆಟ್ಟು ಬಿದ್ದೇ ಸತ್ತಿದ್ದಾನೆ ಎಂದು. ಅಂದಮೇಲೆ ಅವರಿಗೆ ಪರಿಹಾರ ಕೊಡುವುದಕ್ಕೆ ಸರ್ಕಾರ ಹಿಂದುಮುಂದೆ ಯೋಚನೆ ಮಾಡಬಾರದು. ಅದು ತೀರಾ ಬಡ ಕುಟುಂಬವಿರುವುದರಿಂದ ದಯಮಾಡಿ ಮಾನ್ಯ ಮಂತ್ರಿಗಳು ದೊಡ್ಡಮನಸ್ಸು ಮಾಡಿ ಯಾವುದಾದರೂ ನಿಧಿಯಲ್ಲಿ, ಅನೇಕ ನಿಧಿಗಳಿವೆ, ಯಾವುದಾದರೂ ನಿಧಿಯಲ್ಲಿ ಈ ಕುಟುಂಬಕ್ಕೆ ಪರಿಹಾರ ಕೊಡಭೇಕೆಂದು ತಮ್ಮ ಮುಖಾಂತರ ಅವರನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಲಾಕಪ್ ಡೆತ್‌ನಲ್ಲಿ ಸತ್ತಿದ್ದಾನೆ ಎಂದು ಕನ್‌ಫರ್ಮ್ ಮಾಡುವುದಕ್ಕೆ ನನ್ನ ಕೈಯಲ್ಲಿ ಆಗುವುದಿಲ್ಲ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರವನ್ನು ಕೊಟ್ಟಿದ್ದೇನೆ. ಅದು ಯಾವರೀತಿ ಸತ್ತಿದ್ದಾನೆ, ಹೇಗೆ ಸತ್ತಿದ್ದಾನೆ, ಪೋಲೀಸರ ಹೊಡೆತದಿಂದ ಸತ್ತಿದ್ದಾನೆಯೇ ಎಂಬುದನ್ನು ವಿಚಾರಣೆ ಮಾಡುವುದಕ್ಕೆ ನಾವು ಸಿ.ಒ.ಡಿ.ಗೆ ಇದನ್ನು ಕೊಟ್ಟಿದ್ದೇವೆ. ಪರಿಹಾರದ ಬಗ್ಗೆ ಈಗಿರತಕ್ಕ ಕಾನೂನಿನಲ್ಲಿ ಅವಕಾಶ ಇಲ್ಲ. ಕೊಡಲಿಕ್ಕೆ ಬರುವುದಿಲ್ಲ. ಆದರೆ ಈ ಸದನಕ್ಕೆ ತಮ್ಮ ಮೂಲಕ ಭರವಸೆ ಕೊಡುತ್ತಿದ್ದೇನೆ ಈ ರೀತಿ ಪೋಲೀಸ್ ಕಸ್ಟಡಿಯಲ್ಲಿ ಸಾಮಾನ್ಯ ಜನರು ಯಾವುದಾದರೂ ಸಂದರ್ಭದಲ್ಲಿ ಹೋಗಿ ಅವರಿಗೆ ಅನ್ಯಾಯವಾಗಿ ಅವರು ಸತ್ತರೆ ಅವರ ಕುಟುಂಬವರ್ಗದವರಿಗೆ ಪರಿಹಾರ ಕೊಡುವ ವಿಚಾರದಲ್ಲಿ ನಾನು ನಿಮಗೆ ಮಾತು ಕೊಡುತ್ತಿದ್ದೇನೆ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಈಗ ಮಾನ್ಯ ಮಂತ್ರಿಗಳು ಲಾಕಪ್ ಡೆತ್ ಸಾವು ಎಂದು ಎರಡು ಹೇಳಿದ್ದಾರೆ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಈ ಲಾಕಪ್‌ನಲ್ಲಿ ಸಾವಿನ ಪ್ರಕರಣ ಆಗಾಗ ನಡೆಯುತ್ತಿದೆ. ಮಾನ್ಯ ಮಂತ್ರಿಗಳು ಹಿಂದೆ ಒಂದು ಸಾರಿ ಹೇಳಿಕೆ ಕೊಟ್ಟಿರುವುದನ್ನು ನೋಡಿದ್ದೆ. ಲಾಕಪ್ ಸಾವಿಗೆ ಹೊಣೆಗಾರರನ್ನಾಗಿ ಆ ಪೋಲೀಸ್ ಸ್ಟೇಷನ್ನಿನ ಸಬ್-ಇನ್‌ಸ್ಪೆಕ್ಟರನ್ನು ಮಾಡುತ್ತೇವೆ ಎಂಬ ಮಾತನ್ನು ಹೊರಗಡೆ ಹೇಳಿಕೆ ಕೊಟ್ಟಿದ್ದರು. ಇದರ ಬಗ್ಗೆ ಸರ್ಕಾರದ ನೀತಿ ಏನು? ಲಾಕಪ್‌ನಲ್ಲಿ ಆಗಾಗ ಸಾಯುತ್ತಿದ್ದಾರೆ. ಸುಮ್ಮನೆ ಹೀಗೆ ಹೇಳಿಬಿಟ್ಟು ನಾವು ಅವರಿಗೆ ಪರಿಹಾರ ಕೊಡುತ್ತೇವೆ ಹಾಗಿದ್ದರೆ ಎಂದು ಹೇಳಿದರೆ ಆಗುವುದಿಲ್ಲ. ಲಾಕಪ್‌ನಲ್ಲಿ ಸಾಯುವುದನ್ನು ನಿಲ್ಲಿಸುವುದಕ್ಕೆ ಮತ್ತು ಸತ್ತಿರುವುದಕ್ಕೆ ಯಾರನ್ನು ಜವಾಬ್ದಾರಿ ಮಾಡುತ್ತೀರಿ ಎಂಬುದನ್ನು ಸ್ಪಷ್ಟಪಡಿಸಬೇಕು. ನಿಮ್ಮ ಹೇಳಿಕೆಯನ್ನು ನೋಡಿದ್ದೇನೆ ನಾನು.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಸಂಬಂಧಪಟ್ಟ ಠಾಣಾಧಿಕಾರಿಗಳು, ಪೋಲೀಸ್ ಸ್ಟೇಷನ್ ಆಫೀಸರ್ಸ್ ಯಾರು ಇರುತ್ತಾರೆ ಅವರದು ಜವಾಬ್ದಾರಿ ಇರುತ್ತದೆ ಇಂಥ ವಿಚಾರಗಳಲ್ಲಿ. ಪರಿಹಾರದ ಬಗ್ಗೆ ಮತ್ತೊಮ್ಮೆ ಹೇಳುತ್ತಿದ್ದೇನೆ ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 5ನೇ ಸೆಪ್ಟೆಂಬರ್ 1995ರಲ್ಲಿ 15ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 95ಪ್ರಶ್ನೆಗಳ ಪೈಕಿ 86 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ವಿಷಯ:- ಶಿವಮೊಗ್ಗದಲ್ಲಿರುವ ಪೋಲೀಸ್ ಸ್ಟೇಷನ್ ವ್ಯಾಪ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1555 (2192)